# ಅಮೆರಿಕೆಯಲ್ಲಿ ವೇದಾಂತ ಅಂದು ಇಂದು

ಪ್ರವ್ರಾಜಿಕಾ ವ್ರಜಪ್ರಾಣಾ

**ಅಮೆರಿಕೆಯಲ್ಲಿ ವೇದಾಂತ ನೆಲೆಗೊಂಡುದರ ಇತಿಹಾಸದ ಒಂದು ಅದ್ಭುತ ಅಧ್ಯಯನವಾದ ಈ ಲೇಖನ ಪ್ರಬುದ್ಧ ಭಾರತ ಫೆಬ್ರವರಿ ೨೦೦೦ದ ಸಂಚಿಕೆಯಲ್ಲಿ ಪ್ರಕಟವಾಗಿತ್ತು. ಇದರ ಲೇಖಿಕೆ ಅಮೆರಿಕೆಯ ಸಂತಾ ಬಾರ್ಬರಾದ ಶಾರದಾ ಮಠದ ಸಂನ್ಯಾಸಿನಿ—ಪ್ರವ್ರಾಜಿಕಾ ವ್ರಜಪ್ರಾಣಾ—ಹಲವಾರು ಮುಖ್ಯ ಗ್ರಂಥಗಳನ್ನು ಸಂಪಾದಿಸಿದ್ದಾರೆ, ಅನೇಕ ಉಜ್ವಲವಾದ ಲೇಖನಗಳನ್ನು ಬರೆದಿದ್ದಾರೆ. ಅವರ ಇತ್ತೀಚಿನ ಪುಸ್ತಕ, *Vedanta : A Simple Introduction*, ೬೦ ಪುಟಗಳ ಒಂದು ಸೊಗಸಾದ ಕೃತಿ. ಪ್ರಸಕ್ತ ಲೇಖನದ ಅನುವಾದಕರು ಶ್ರೀಯುತ ಕೆ.ಬಿ.ಪ್ರಭುಪ್ರಸಾದರು.**

**ಹಿಂದೆ** 'ದೇವವಾಣಿ' ಧರ್ಮಪ್ರಸಾರಕರಾಗಿದ್ದ, ಈಗ ಅಮೆರಿಕಾದ ಕ್ಯಾಥೊಲಿಕ್ ವಿಶ್ವವಿದ್ಯಾನಿಲಯವೊಂದರಲ್ಲಿ ದೈವಶಾಸ್ತ್ರ ವಿಷಯದ ಪ್ರಾಧ್ಯಾಪಕರಾಗಿರುವ, ಪಾಲ್ ನಿಟ್ಟರ್ ಒಂದು ಕಡೆ ಬರೆಯುತ್ತಾರೆ: 'ಸ್ವರ್ಗ ಸಾಮ್ರಾಜ್ಯವನ್ನು ನೆಲೆಗೊಳಿಸಬೇಕು ಎಂದರೆ ಕ್ರೈಸ್ತರು ಕ್ರಿಸ್ತನ ಜ್ವಲಂತ ನಿದರ್ಶನವಾಗಬೇಕು. ಮಾನವೇತಿಹಾಸದುದ್ದಕ್ಕೂ ನಿರಂತರವಾಗಿ ದೇವರು ಇರುವನು ಎಂಬ ಸತ್ಯವನ್ನು ಪೂರ್ಣವಾಗಿ ಗ್ರಹಿಸಲೋಸುಗ ಜಗತ್ತಿನ ಎಲ್ಲ ಜನರೂ, ಎಲ್ಲ ಧರ್ಮಗಳೂ ಕ್ರಿಸ್ತನನ್ನರಿಯಬೇಕು. .... ಆದರೆ ಚರ್ಚುಗಳ ಹೊಸ ಶಾಸ್ತ್ರದಲ್ಲಿ, ಸತ್ಯದ ಹೊಸ ಮಾದರಿಯಾಗಿ—ಎಲ್ಲ ಮಾನವರೂ ಬುದ್ಧನನ್ನು, ಮಹಮ್ಮದನನ್ನು, ಕೃಷ್ಣನನ್ನು ಸಹ ಅರಿಯಬೇಕು ಎನ್ನುವುದನ್ನೂ ಯಾರಾದರೂ ಒಪ್ಪುತ್ತಾರೆ.' (*No Other Name?*, ನ್ಯೂಯಾರ್ಕ್ ಆರ್ಬಿಸ್ ೧೯೮೫, ಪುಟ.೨೨೨.)

'**ಕ್ರೈಸ್ತ ಸುವಾರ್ತೆಯ ಬೋಧನೆಯಿಂದ ಕ್ರೈಸ್ತನು ಇನ್ನೂ ಉತ್ತಮ ಕ್ರೈಸ್ತನೂ, ಬೌದ್ಧಧರ್ಮೀಯನು ಇನ್ನೂ ಉತ್ತಮ ಬೌದ್ಧನೂ ಆಗುವಂತಾದಾಗ ಕ್ರೈಸ್ತಧರ್ಮಪ್ರಸಾರದ ಉದ್ದೇಶ ಈಡೇರಿದಂತೆ**' (ಅದೇ) ಎಂದು ಕ್ರೈಸ್ತ ಮಿಷನರಿಯೊಬ್ಬನು ಹೇಳುವುದನ್ನು ಮೂವತ್ತು ವರ್ಷಗಳ ಕೆಳಗೆ ಕಲ್ಪಿಸಿಕೊಳ್ಳುವುದೂ ಅಸಾಧ್ಯವಾಗಿತ್ತು.

ನಿಶ್ಚಯವಾಗಿ ವೇದಾಂತಸಾರವನ್ನೇ ಒಳಗೊಂಡಿರುವ ಇಂಥ ಮಾತುಗಳು ಒಬ್ಬ ಕ್ರೈಸ್ತಧರ್ಮಪ್ರಸಾರಕನ, ದೈವಶಾಸ್ತ್ರ ಪರಿಣತನ ಪ್ರಾರ್ಥನಾ ಗೀತೆಯಲ್ಲಿ ಸೇರಿದ್ದುದು ಆಶ್ಚರ್ಯದ ಸಂಗತಿ. ಇಲ್ಲಿ, ವಿಚಾರ ಹಾಗೂ ಮನೋಧರ್ಮಗಳ ವಲಯದಲ್ಲಿ ವೇದಾಂತ ಅಮೆರಿಕೆಯ ಮೇಲೆ ಬೀರಿದ ಪರಿವರ್ತನಕಾರಿ ಪ್ರಭಾವವನ್ನು ಸ್ಪಷ್ಟವಾಗಿ ಕಾಣಬಹುದು. ಅಮೆರಿಕೆಯ ಬಾಳ್ನೋಟವನ್ನೆ ರೂಪಾಂತರಿಸುವುದರಲ್ಲಿ ವೇದಾಂತ ಚಳುವಳಿಯ ಪಾತ್ರ ಮಹತ್ತರವಾದುದು ಎಂದು ಹೇಳಿದರೆ ಅತಿಶಯೋಕ್ತಿಯಲ್ಲ. ಪಶ್ಚಿಮ ದೇಶಗಳಲ್ಲಾದ ಇತರ ಧರ್ಮಗಳ ಚಳುವಳಿಗಳಷ್ಟು ದೊಡ್ಡದಲ್ಲದ, ಸಣ್ಣ ಪ್ರಮಾಣದ ವೇದಾಂತ ಚಳುವಳಿಯನ್ನು ಗಮನಿಸಿದರೆ ಆದು ಉಂಟುಮಾಡಿದ ಈ ಪರಿವರ್ತನೆಯ ಮಹತ್ತು ಎಷ್ಟು ಅಸಾಧಾರಣವಾದುದೆಂದು ಅರ್ಥವಾಗುತ್ತದೆ.

ವೇದಾಂತ ಸಂಘಗಳಿಗೆ ಎಷ್ಟು ಜನ ಬರುತ್ತಾರೆ ಎಂಬುದರ ಮೇಲೆ ಪಾಶ್ಚಾತ್ಯ ಜಗತ್ತಿನ ಮೇಲೆ ಆಗಿರುವ ವೇದಾಂತದ ಪ್ರಭಾವವನ್ನು ಅಳೆಯಹೋದರೆ ಖಂಡಿತವಾಗಿಯೂ ನಿರಾಶರಾಗಬೇಕಾಗುತ್ತದೆ. ಸ್ವಾಮಿ ವಿವೇಕಾನಂದರ ಗುರಿ ಪಾಶ್ಚಾತ್ಯ ದೇಶಗಳಲ್ಲಿ ಸದ್ವಿಚಾರಗಳ ಪ್ರಸಾರವೇ ವಿನಾ ಗುಡಿ-ಮಠಗಳ ಸ್ಥಾಪನೆಯಾಗಿರಲಿಲ್ಲ ಎಂಬುದನ್ನು ನೆನಪಿಸಿಕೊಳ್ಳೋಣ. ಜ್ಞಾನಪ್ರಸಾರದ ಈ ಕಾರ್ಯದಲ್ಲಿ, ಮನೋಧರ್ಮದ ಪರಿವರ್ತನೆಯಲ್ಲಿ ವೇದಾಂತ ಚಳುವಳಿ ಒಳ್ಳೆಯ ಯಶಸ್ಸನ್ನೆ ಸಾಧಿಸಿದೆ. ವೇದಾಂತವನ್ನು ಸ್ವೀಕಾರ ಮಾಡಿರುವ ನಮ್ಮ ಸಂಖ್ಯೆ ಕಡಮೆ ಇರುವುದಾದರೂ ಅಮೆರಿಕೆಯ ಮೇಲೆ ಆಗಿರುವ ವೇದಾಂತದ ಪ್ರಭಾವ ಅಗಾಧವಾಗಿರುವುದಂತೂ ಪ್ರಶ್ನಾತೀತ. ಪಾಶ್ಚಾತ್ಯ ದೇಶಗಳಲ್ಲಿ ಆದ ವೇದಾಂತ ಚಳುವಳಿಯನ್ನು ಕುರಿತು, ಕಾರ್ಲ್ ಜಾಕ್ಸನ್ ಎಂಬ ಅಮೆರಿಕೆಯ ಚರಿತ್ರಕಾರ, 'ಇದೇ ವಾಮನ ಗಾತ್ರವಿರುವ ಬೇರಾವ ಧಾರ್ಮಿಕ ಪಂಥಗಳೂ, ಈ ಚಳುವಳಿ ಸಾಧಿಸಿದ ಮಹತ್ಪರಿಣಾಮದ, ಇದರ ಐತಿಹಾಸಿಕ ಮಹತ್ವದ ಸಮಕ್ಕೆ ಬರುವುದಿಲ್ಲ' ಎಂದು ಬರೆಯುತ್ತಾನೆ. ಇದು ಸಾಧ್ಯವಾದದ್ದು ವಿಶ್ವದ ಮಹಾ ಮೇಧಾವಿಗಳ ಮುಖಾಂತರ ವೇದಾಂತ ವಿಚಾರಗಳು ಪ್ರಸಾರವಾದುದರಿಂದ.

ಎಮರ್ಸನ್, ಥೋರೊ, ವ್ಹಿಟ್ಮನ್ ಮತ್ತಿತರೆ ಭೌತಾತೀತ ಚಿಂತನಶೀಲರ (*Transcendentalists*) ಮೂಲಕ ಆ ಕಾಲಕ್ಕಾಗಲೆ ಪೌರಸ್ತ್ಯ ತತ್ತ್ವವಿಚಾರಗಳು ಪಶ್ಚಿಮತಡಿಯಲ್ಲಿ ಕಾಣಿಸಿಕೊಂಡಿದ್ದವು. ೧೮೯೩ರಲ್ಲಿ ಸ್ವಾಮಿ ವಿವೇಕಾನಂದರ ದಿವ್ಯವಾಣಿ ಮೊಳಗಿದುದೇ ತಡ ಅದುವರೆಗೆ ಸಣ್ಣ ತೊರೆಯಾಗಿ ಹರಿಯುತ್ತಿದ್ದ ಪೌರಸ್ತ್ಯ ವಿಚಾರಧಾರೆ ಪ್ರಚಂಡ ಪ್ರವಾಹವಾಗಿ ಪ್ರವಹಿಸತೊಡಗಿತು.

ಸ್ವಾಮೀಜಿ ವಿಸ್ತಾರವಾಗಿ ಪರ್ಯಟನ ಮಾಡಿದರು. ಹೋದೆಡೆಯಲ್ಲೆಲ್ಲ ಉಪನ್ಯಾಸ ನೀಡಿದರು. ಆ ಉಪನ್ಯಾಸಗಳ ವಾರ್ತೆ—ವರದಿಗಳೂ ವ್ಯಾಪಕವಾಗಿ ಹರಡಿದವು. ಎಲ್ಲ ವರ್ಗದ ಎಲ್ಲ ಶ್ರೇಣಿಯ ಜನರೂ ಅವುಗಳನ್ನು ಕುರಿತು ಆಸ್ಥೆಯಿಂದ ಚರ್ಚೆ ಮಾಡಿದರು. ಸ್ವಾಮೀಜಿ ಅಮೆರಿಕಾ ಪ್ರವಾಸ ಮುಗಿಸಿ ಹೊರಟು ಹೋದಮೇಲೆ, ಆಸಕ್ತರಾಗಿದ್ದ ಮಿತ್ರರು ಅಲ್ಲಲ್ಲಿ ಸಣ್ಣ ಪುಟ್ಟ ಸಂಘಗಳನ್ನು ಮಾಡಿಕೊಂಡು ವೇದಾಂತ ವಿಚಾರಗಳ ಚರ್ಚೆಯನ್ನು ಮುಂದುವರೆಸಿದರು. ವೇದಾಂತದ ಅನುಷ್ಠಾನದಲ್ಲೂ ತೊಡಗಿದರು. ಆದರೇನು ಈ ಗುಂಪುಗಳು ಸಮಾಜದ ಮೇಲೆ ಅಂಥಾ ಪ್ರಭಾವವನ್ನೇನೂ ಬೀರಲಿಲ್ಲ. ಆದರೆ ಆ ಕಾಲದ ಸಾಮಾಜಿಕ ಹಾಗೂ

ಪೌರಾಣಿಕ ಘಟಾನುಘಟಿಗಳೆನಿಸಿದ್ದ ವ್ಯಕ್ತಿಗಳ ಪ್ರಭಾವ ಬಲವಾಗಿತ್ತು. ಅವರು ವೇದಾಂತದಲ್ಲಿ ತಳೆದ ಆಸಕ್ತಿ ಅದರ ಪ್ರಭಾವ ಸಮಾಜದ ಮೇಲೆ ಹೆಚ್ಚಾಗಿ ಬೀಳುವುದಕ್ಕೆ ಕಾರಣವಾಯಿತು. ಸ್ವಾಮೀಜಿಯ ಅಲ್ಪಕಾಲೀನ ಅಮೆರಿಕ ವಾಸ ಮುಗಿದು ಎಷ್ಟೋಕಾಲದ ನಂತರವೂ ಈ ವೇದಾಂತದ ಪ್ರಭಾವ ವ್ಯಾಪಕವಾಗಿ ಬಹುಕಾಲ ಹರಡುವುದಕ್ಕೂ ಈ ನಾಯಕಮಣಿಗಳು ವಹಿಸಿದ ಆಸಕ್ತಿಯೆ ಕಾರಣ.

ಪಾಶ್ಚಾತ್ಯ ಜಗತ್ತಿನಂಗಳದಲ್ಲಿ ವೇದಾಂತ ಧರ್ಮಚಕ್ರ ಹೇಗೆ ಸತತವಾಗಿ ಉರುಳುತ್ತಲಿತ್ತು ಎಂಬುದಕ್ಕೆ ಶ್ರೇಷ್ಠ ರಸಾಭಿಜ್ಞೆ ಎನಿಸಿದ್ದ ಜೋಸೆಫಿನ್ ಮ್ಯಾಕ್ಲಿಯೋಡ್‌ರ ಕಾರ್ಯ ಚಟುವಟಿಕೆಗಳೇ ಒಂದು ಮನೋಜ್ಞ ಉದಾಹರಣೆ. ನಿಜಕ್ಕೂ ವಿಶ್ವಮಾನವಿಯಾಗಿದ್ದ ಈಕೆಯ ಏಕೈಕ ಆಕಾಂಕ್ಷೆ, ತಾವು ಹೋದೆಡೆಯೆಲ್ಲ ಸ್ವಾಮೀಜಿಯ ಸಂದೇಶವನ್ನು ಪ್ರಸಾರಮಾಡುವುದಾಗಿತ್ತು. ಅತ್ಯಂತ ವರ್ಚಸ್ವಿಗಳಾದ ವ್ಯಕ್ತಿಗಳನ್ನು ಹಿಡಿದು ಸ್ವಾಮೀಜಿಯವರ ಸಂದೇಶಸುಧೆಯನ್ನು ಅವರಿಗೆ ಕುಡಿಸುವುದು, ತನ್ನ ಉತ್ಸಾಹವನ್ನು ಅವರಿಗೂ ಅಂಟಿಸುವುದು, ಇದು ಆಕೆಯ ಕಾರ್ಯವಿಧಾನ. ‘ ಈ ಕಾರ್ಯಕ್ಕಾಗಿಯೆ, ಸ್ವಾಮೀಜಿ ನಿನ್ನನ್ನೀ ಜಗತ್ತಿನಲ್ಲಿ ಉಳಿಸಿರುವುದು; ಕೆದಕಿ, ಹುಡುಕಿ ಮಹಾವ್ಯಕ್ತಿಗಳನ್ನು ಪತ್ತೆ ಮಾಡುವಂತೆ ನಿನಗೆ ಪ್ರೇರಣೆ ನೀಡಿರುವುದು’—ಎಂದು ಒಮ್ಮೆ ಸ್ವಾಮಿ ಶಿವಾನಂದರು ಆಕೆಗೆ ತಿಳಿಸಿದ್ದರು. (*Tantine: The Life of Josephine MacLeod*, p.203)

ಗೆದ್ದುದಕ್ಕೆ ಆಕೆಗೆ ಪಾರಿತೋಷಿಕದಂತೆ ರೋಮ್ಯ ರೋಲಾ ದೊರೆತರು. ಆ ಕಾಲಕ್ಕೆ ಅತ್ಯಂತ ಶ್ರೇಷ್ಠ ಫ್ರೆಂಚ್ ಲೇಖಕರೆನಿಸಿದ್ದ ರೋಲಾರಿಗೆ ೧೯೧೫ರಲ್ಲಿ ನೋಬೆಲ್ ಪ್ರಶಸ್ತಿ ದೊರೆಯಿತು. ಸ್ವಾರಸ್ಯವಾದ ಸಂಗತಿಯೆಂದರೆ ಧನಗೋಪಾಲ್ ಮುಖರ್ಜಿ ಎಂಬ ವ್ಯಕ್ತಿಯನ್ನು ಜೋಸೆಫಿನ್ ಮ್ಯಾಕ್ಲಿಯೋಡ್ ಅಮೆರಿಕೆಯಲ್ಲಿ ಆಕಸ್ಮಿಕವಾಗಿ ಭೆಟ್ಟಿಯಾಗಿದ್ದರು. ಆತನಿಗೆ ಸ್ಫೂರ್ತಿಯಿತ್ತು ಶ್ರೀರಾಮಕೃಷ್ಣರ ಬಗ್ಗೆ ಬರೆಯಲು ಹುರಿದುಂಬಿಸಿದ್ದರು. ಆತನಿಗೆ ತನ್ನೆಲ್ಲ ಶ್ರದ್ಧೆ, ಉತ್ಸಾಹ, ಜ್ಞಾನಸಂಪದಗಳನ್ನು ಧಾರೆಯೆರೆದರು. ಈ ಪ್ರಯತ್ನದ ಫಲವೇ ಶ್ರೀರಾಮಕೃಷ್ಣರನ್ನು ಕುರಿತು ಮುಖರ್ಜಿ ಬರೆದ ಪುಸ್ತಕ ***The Face of Silence***. ೧೯೨೬ರಲ್ಲಿ ಲೀಗ್ ಆಫ್ ನೇಶನ್ಸ್ ಆರಿಸಿದ ೪೦ ಪರಮ ಶ್ರೇಷ್ಠ ಗ್ರಂಥಗಳಲ್ಲಿ ಇದೂ ಒಂದು. ಜಿನಿವಾದ ಅಂತರರಾಷ್ಟ್ರೀಯ ಗ್ರಂಥ ಭಂಡಾರದಲ್ಲಿರಿಸುವುದಕ್ಕೂ ಆಯ್ಕೆಯಾದ ಪುಸ್ತಕ. ಮುಖರ್ಜಿಯವರ ಮೂಲಕವೇ ಮೊಟ್ಟಮೊದಲು, ರೋಮ್ಯ ರೋಲಾ ರಾಮಕೃಷ್ಣರ ಬಗ್ಗೆ ತಿಳಿದು ಆಸಕ್ತರಾದುದು.

ಮುಖರ್ಜಿಯ ಪುಸ್ತಕವನ್ನೋದಿದ ರೋಲಾ ಪುಸ್ತಕದ ನಾಯಕನಿಗೆ ಮನಸೋತ. ರೋಲಾನ ಈ ಆಸಕ್ತಿಯ ವಿಚಾರವನ್ನು ಮುಖರ್ಜಿ ಮ್ಯಾಕ್ಲಿಯೋಡ್‌ಗೆ ತಿಳಿಸಿದ. ಕೂಡಲೆ ಆಕೆ ರೋಲಾರಿಗೆ ಶ್ರೀರಾಮಕೃಷ್ಣ-ವಿವೇಕಾನಂದರ ಮೇಲಿನ ಪುಸ್ತಕಗಳನ್ನು ಕಳಿಸಿದರು. ಇದು ಸಂತೋಷದಾಯಕ ಫಲವನ್ನೇ ಕೊಟ್ಟಿತು. *The Life of Ramakrishna* ಮತ್ತು *The Life of Vivekananda and the Universal Gospel* ಎಂಬ ಸೊಗಸಾದ ಎರಡು ಪುಸ್ತಕಗಳನ್ನು ರೋಲಾ ಬರೆದು ಪ್ರಕಟಿಸಿದರು. ರೋಲಾರ ಉನ್ನತ ವ್ಯಕ್ತಿತ್ವವನ್ನಾಗಲೆ ತಿಳಿದು ಮೆಚ್ಚಿದ್ದ ಬಹು ಜನ ಈ ಗ್ರಂಥಗಳನ್ನೋದಿದರು. ಪುಸ್ತಕಗಳು ತುಂಬಾ ಜನಪ್ರಿಯವಾದವು. ಅನೇಕ ವಿದೇಶೀ ಭಾಷೆಗಳಿಗೆ ಅನುವಾದಗೊಂಡವು.

೨೦ ವರ್ಷಗಳ ನಂತರ ರೋಲಾರ ಈ ಪುಸ್ತಕಗಳನ್ನೋದಿದವರಲ್ಲಿ ಹೆನ್ರಿ ಮಿಲ್ಲರ್ ಎಂಬ ಅಮೆರಿಕೆಯ ಲೇಖಕರೂ ಒಬ್ಬರು. ಅವರು ಒಮ್ಮೆ ಅಮೆರಿಕೆಯ ಭೂಖಂಡದ ಒಂದು ಕಡೆಯಿಂದ ಇನ್ನೊಂದು ಕಡೆಯವರೆಗಿನ ವಿಸ್ತಾರವನ್ನು ಅಳೆಯುವಂತೆ ಪ್ರವಾಸ ಮಾಡುವಾಗ ರೋಲಾರ ಪುಸ್ತಕಗಳನ್ನೋದಿದರು. ಮಿಲ್ಲರ್ ತಮ್ಮ *The Air-conditioned Nightmare* ಎಂಬ ಪುಸ್ತಕದಲ್ಲಿ (p.18) ‘ಪ್ರವಾಸವೇನೊ ಮುಗಿಯಿತು. ಆಗ ನಾನು ರೋಮ್ಯ ರೋಲಾರ ರಾಮಕೃಷ್ಣ-ವಿವೇಕಾನಂದರನ್ನು ಕುರಿತ ಎರಡು ಪುಸ್ತಕಗಳನ್ನು ಓದಿದ ನೆನಪು ಅಚ್ಚಳಿಯದೆ ಉಳಿದಿದೆ. ಅದೊಂದು ಮರೆಯಲಾಗದ ವಿಶೇಷ ಅನುಭವ, ನನ್ನಲ್ಲಿ ಹರ್ಷ-ರೋಮಾಂಚನವುಂಟಾಯಿತು,’ ಎಂದು ಬರೆಯುತ್ತಾರೆ.

ತಮ್ಮ ಬಿಸಿ ಬಿಸಿ ಕಾದಂಬರಿಗಳಿಗೂ, ಸೆನ್ಸಾರ್‌ಷಿಪ್ ಕದನಗಳಿಗೂ ಮುಖ್ಯವಾಗಿ ಹೆಸರಾದ ಮಿಲ್ಲರ್ ಶ್ರೀರಾಮಕೃಷ್ಣ-ವಿವೇಕಾನಂದರಲ್ಲಿ ಸ್ಫೂರ್ತಿಯನ್ನು ಕಂಡುಕೊಳ್ಳುವುದೆಂದರೆ ನಂಬಲಸಾಧ್ಯವಾದ ಮಾತು. ಆದರೆ ನಿಜ. ತಾವು ಸ್ಫೂರ್ತಿಗೊಂಡುದಲ್ಲದೆ ಇತರೆ ಸಾರ್ವಜನಿಕರ ಗಮನಕ್ಕೂ ಅವರ ವಿಚಾರವನ್ನು ತಂದು ಸ್ಫೂರ್ತಿ ಹುಟ್ಟಿಸಿದರು.

*The Air -conditioned Nightmare* ಆರಂಭವಾಗುವುದೇ ‘ವಿವೇಕಾನಂದ’ ಪುಸ್ತಕದಿಂದ ಆಯ್ದ ಎರಡು ದೀರ್ಘ ಉಲ್ಲೇಖನಗಳಿಂದ—ಇಡೀ ಒಂದು ಪುಟದಷ್ಟು! ಅನಂತರ ಪುಸ್ತಕದುದ್ದಕ್ಕೂ ಶ್ರೀರಾಮಕೃಷ್ಣ-ವಿವೇಕಾನಂದರ ಬಗ್ಗೆ ಬರುತ್ತಲೇ ಇರುತ್ತದೆ. ಶ್ರೀರಾಮಕೃಷ್ಣರು ಪ್ರೇಮ-ವಿವೇಕಗಳ ಸಾಕ್ಷಾತ್ ರೂಪ ಎಂದು ಒಂದು ಕಡೆ ಬರೆದು, ಹಲವಾರು ಪುಟಗಳ ನಂತರ, ಮುಂದೆ, ‘ನಾನು ಪಿಟ್ಸ್‌ಬರ್ಗ್ ಬಿಡುವುದರೊಳಗೆ ನನ್ನ ತುಂಬೆಲ್ಲ ರಾಮಕೃಷ್ಣರೇ ತುಂಬಿದ್ದರು. ರಾಮಕೃಷ್ಣರು ಯಾರನ್ನೂ ವಿಮರ್ಶೆ ಮಾಡಲು ಹೋಗಲಿಲ್ಲ, ಟೀಕಿಸಹೋಗಲಿಲ್ಲ, ಅವರೆಂದೂ ಉಪದೇಶ ಮಾಡಲಿಲ್ಲ, ಎಲ್ಲ ಧರ್ಮಗಳನ್ನೂ ಶ್ರೇಷ್ಠ, ಸತ್ಯ—ಎಂದು ಒಪ್ಪಿಕೊಂಡಿದ್ದರು. ಎಲ್ಲೆಲ್ಲಿಯೂ ಎಲ್ಲದರಲ್ಲಿಯೂ ದೇವರನ್ನೇ ಕಾಣುತ್ತಿದ್ದರು. ಇದುವರೆಗೆ ಜಗತ್ತು ಕಂಡ ವ್ಯಕ್ತಿಗಳಲ್ಲಿ ಸದಾ ಉನ್ನತ ಆನಂದದ ಸಮಾಧಿಸ್ಥಿತಿಯಲ್ಲಿರುತ್ತಿದ್ದವರೆಂದರೆ ಅವರೊಬ್ಬರೆ. ಅವರಂಥ ವ್ಯಕ್ತಿ ಮತ್ತೊಬ್ಬರಿಲ್ಲ ಎಂದು ನನಗನಿಸುತ್ತದೆ’ ಎಂದು ಬರೆಯುತ್ತಾರೆ. ಅಮೆರಿಕೆಯಲ್ಲಿ ಶ್ರೀರಾಮಕೃಷ್ಣರು ಯಾರಿಗೂ ಗೊತ್ತಿಲ್ಲವಲ್ಲಾ ಎಂದು ತುಂಬಾ ವಿಷಾದದಿಂದ ಹೇಳುತ್ತಾರೆ. ಮಿಲ್ಲರ್‌ರ ಈ ಮಾತು, ಅಂಕಿ-ಅಂಶಗಳು ಸತ್ಯದೂರವಾಗಿರಲಿಲ್ಲ. ಆದರೆ ಈಗ ಎಷ್ಟೋ ಜನ ಗಣ್ಯರು ರಾಮಕೃಷ್ಣ ಭಕ್ತರಾಗಿದ್ದಾರೆ. ಹೆನ್ರಿ ಮಿಲ್ಲರ್‌ರ ಈ ಪುಸ್ತಕವನ್ನು ಓದದೆ ಹೋಗಿದ್ದರೆ ಎಷ್ಟೋ ಜನ ತಮ್ಮ ಜೀವನದಲ್ಲೆಂದೂ ರಾಮಕೃಷ್ಣರನ್ನು ಪತ್ತೆ ಹಚ್ಚುತ್ತಿರಲಿಲ್ಲ.

ಮಿಲ್ಲರ್‌ರ ಸಮಸ್ತ ಅಮೆರಿಕಾ ಪರ್ಯಟನ ಅವರನ್ನು ನೇರವಾಗಿ ಸ್ವಾಮಿ ಪ್ರಭವಾನಂದರೆದುರಿಗೆ ತಂದು ನಿಲ್ಲಿಸಿತು. ಆತ ಅವರನ್ನು ಭೆಟ್ಟಿಯಾದುದು ಅದೇ ಮೊದಲ ಬಾರಿ. ಅದೊಂದೇ ಸಲ. ಆದರೆ ಅಷ್ಟೇ ಸಾಕು, 'ಅವರು ನನ್ನ ಮನಸ್ಸಿನ ಮೇಲೆ ಗಾಢಮುದ್ರೆಯನ್ನೊತ್ತಿದರು,' ಎಂದು ಆತ ಬರೆಯುವ ಹಾಗಾಯಿತು. ಹೀಗೆಯೆ ಆಲ್ಡಸ್ ಹಕ್ಸ್‌ಲಿ, ಕ್ರಿಸ್ಟೋಫರ್ ಇಷರ್‌ವುಡ್ ಮತ್ತು ಗೆರಾಲ್ಡ್ ಹರ್ಡ್ ಎಂಬ ಸಾಂಸ್ಕೃತಿಕ ಪ್ರತೀಕರೆನಿಸಿದ್ದ ಇನ್ನೂ ಮೂವರು ಈ ಸ್ವಾಮಿಗಳ ಪ್ರಭಾವಕ್ಕೆ ಒಳಗಾಗಿದ್ದರು. ಪರಿಣಾಮವಾಗಿ ಇವರೂ ಕೂಡ ತಾವಾಗಿಯೆ ವೇದಾಂತ ವಿಚಾರಗಳನ್ನು ಅಸಂಖ್ಯಾತ ಜನರಿಗೆ ತಲುಪಿಸಿದರು.

**'ಅನುಭಾವ ಮತ್ತು ಪಾರಮಾರ್ಥಿಕ ಸಂಬಂಧದ ಲೇಖನ ಮತ್ತು ಪ್ರವಚನಗಳ ಬಗ್ಗೆ ಆಸಕ್ತಿ ತೋರುವವರ ಸಂಖ್ಯೆ ಹಕ್ಸ್‌ಲಿ, ಇಷರ್‌ವುಡ್, ಹರ್ಡ್‌ರಂತಹ ಚಿಂತನಶೀಲರ ಪುಸ್ತಕಗಳನ್ನೋದಿ ಹೆಚ್ಚುಹೆಚ್ಚಾಗಿ ಬೆಳೆಯತೊಡಗಿತು,'** ಎಂದು ಅಮೆರಿಕೆಯ ಹ್ಯಾಲ್ ಬ್ರಿಡ್ಜಸ್ ಎಂಬ ಇತಿಹಾಸಕಾರ ಬರೆಯುತ್ತಾನೆ.(*American Mysticism p.74*).

ಹರ್ಡ್ ಮತ್ತು ಇಷರ್‌ವುಡ್‌ರೊಡನೆ ಹಕ್ಸ್‌ಲಿಯೂ ಪ್ರಭವಾನಂದರಿಂದ ದೀಕ್ಷೆ ತೆಗೆದುಕೊಂಡರು. ಹಾಗೆಯೆ ಅವರಂತೆ ದಕ್ಷಿಣ ಕ್ಯಾಲಿಫೋರ್ನಿಯಾದ *Vedanta and the West* ಎಂಬ ನಿಯತಕಾಲಿಕ ಪತ್ರಿಕೆಯ ಚಂದಾದಾರರೂ ಆದರು. ಹಕ್ಸ್‌ಲಿ ೩೧ ಪುಸ್ತಕಗಳನ್ನೂ ೬೫ ಕಥೆಗಳನ್ನೂ ಹಲವಾರು ಲೇಖನಗಳನ್ನೂ ಬರೆದಿದ್ದಾರೆ. ಅವುಗಳಲ್ಲಿ ಅನೇಕ ಬರಹಗಳಲ್ಲಿ ವೇದಾಂತ ವಿಚಾರಗಳೇ ಕಾಣಿಸಿಕೊಳ್ಳುತ್ತವೆ, ಕೆಲವಕ್ಕೆ ವೇದಾಂತವೇ ವಸ್ತು. ಅವರ ಕಾದಂಬರಿಗಳೂ ಸಹ ಅವರ ತಾತ್ವಿಕ ವಿಚಾರಗಳನ್ನು ಅಭಿವ್ಯಕ್ತಿಸಲೆಂದೇ ರಚಿತವಾದವು. *The Perennial Philosophy* ಎಂಬ ಸುಪ್ರಸಿದ್ಧ ತತ್ವಜ್ಞಾನದ ಪುಸ್ತಕ ೧೯೪೪ರಲ್ಲಿ ಪ್ರಕಟವಾಯಿತು. ಆದುದೇ ತಡ ಅದರ ಬಗ್ಗೆ ವಿಮರ್ಶಕರ ಮೆಚ್ಚುಗೆ, ಮನ್ನಣೆಗಳು ಹೊರಬಿದ್ದವು. ಅದು ಹಕ್ಸ್‌ಲಿಯ ಆಚಾರ್ಯಕೃತಿ ಎಂದಿತು *The New York Times* ಪತ್ರಿಕೆ. ಸುಮಾರು ಅರ್ಧ ಶತಮಾನ ಕಾಲ ಅದರ ವಾಚನವ್ಯಾಪ್ತಿ ಹೆಚ್ಚುತ್ತಲೆ ಹೋಯಿತು. ಇಡೀ ಪುಸ್ತಕದ ವಿಚಾರಲಹರಿಯ ಬೀಸು ಮತ್ತು, **'ಮಾನವ ಜೀವಿತೋದ್ದೇಶ : ಅನುಭಾವ ಮತ್ತು ಭಗವಚ್ಚಿಂತನ, ದೇವರನ್ನು ನೇರವಾಗಿ ಅಂತಃಸ್ಫುರಣದ ಮೂಲಕ ಅರಿಯುವುದು,'** ಎಂಬ ಸೂಚನೆ (*The Perennial Philosophy, p. 294*) ಓದುಗರ ಮನವನ್ನು ತಟ್ಟುತ್ತದೆ.

ಗೆರಾಲ್ಡ್ ಹರ್ಡ್‌ರನ್ನು ಈಗ ಎಲ್ಲರೂ ಮರೆತಿದ್ದಾರೆ. ತಮ್ಮ ಜೀವಿತ ಕಾಲದಲ್ಲಿ ಬಹು ಸನ್ಮಾನಿತರಾಗಿದ್ದರು. ಅವರ ಉಚ್ಛ್ರಾಯಕಾಲದಲ್ಲಿ ಅಂದರೆ ೪೦-೫೦ರ ದಶಕದಲ್ಲಿ ಅವರ ಪುಸ್ತಕಗಳನ್ನು ಬಹಳ ಜನ ಓದುತ್ತಿದ್ದರು. ಅವರು ೪೭ ಪುಸ್ತಕಗಳನ್ನು ಬರೆದಿದ್ದಾರೆ. ಅವುಗಳಲ್ಲಿ ಅನೇಕ ಕೃತಿಗಳು ನೇರವಾಗಿ ವೇದಾಂತಕ್ಕೆ ಸಂಬಂಧಿಸಿವೆ. ಅವರ ನೇರವಾದ ಪ್ರಭಾವವೇ ಡಾ.ಹ್ಯೂಸ್ಟನ್ ಸ್ಮಿತ್ ವೇದಾಂತಕ್ಕೆ ಬರುವಂತೆ ಮಾಡಿತು. ಅವರ ನೆರವಿನಿಂದಲೆ ಡಾ. ಸ್ಮಿತ್ ಸೇಂಟ್‌ಲೂಯಿಯಲ್ಲಿ ಸ್ವಾಮಿ ಸತ್ಪ್ರಕಾಶಾನಂದರನ್ನು ಭೆಟ್ಟಿಯಾದರು ಮತ್ತು ಆಧ್ಯಾತ್ಮಿಕ ಪುಷ್ಟಿ ಮತ್ತು ಪೋಷಣೆಯನ್ನು ಪಡೆದರು.

೮೦ ವರ್ಷದ ಡಾ.ಸ್ಮಿತ್ ಇವತ್ತು ವೇದಾಂತ ಚಟುವಟಿಕೆಗಳಿಗೆ ಸಕ್ರಿಯ ಬೆಂಬಲ ನೀಡುತ್ತಿದ್ದಾರೆ. ಈಚಿನ ವರ್ಷಗಳಲ್ಲಿ ಅವರನ್ನು ಜಾಗತಿಕ ಧರ್ಮಗಳ ಬಗ್ಗೆ ಅಧಿಕಾರವಾಣಿಯಿಂದ ಹೇಳಬಲ್ಲ ದೊಡ್ಡ ವಿದ್ವಾಂಸ , ಸಮೂಹ ಮಾಧ್ಯಮಗಳ ಗಣ್ಯ ತಾರೆ ಎಂದು ಕರೆದಿದ್ದಾರೆ. ಇವರ ಕೃತಿ *The World Religions* (ಶೀರ್ಷಿಕೆ ಮೊದಲು *The Religions of Man* ಎಂದು ಇತ್ತು) ದೊಡ್ಡ ಹೆಸರು ತಂದಿತು. *The Illustrated World Religions* ಎಂಬ ಹೆಸರಿನಲ್ಲಿ ಈ ಕೃತಿಯ ಬೇರೆ ಅವತರಣವೂ ಆಗಿದೆ. ೧೯೫೮ರಲ್ಲಿ ಪ್ರಕಟವಾದ ಈ ಪುಸ್ತಕ, ಅನೇಕ ಮುದ್ರಣಗಳನ್ನು ಕಾಣುತ್ತ ೨೦ ಲಕ್ಷಕ್ಕೂ ಹೆಚ್ಚು ಪ್ರತಿಗಳು ಮಾರಾಟವಾಗಿವೆ. ೧೪ ಬೇರೆ ಬೇರೆ ಭಾಷೆಗಳಿಗೆ ಅನುವಾದವಾಗಿದೆ. ಕಾಲೇಜುಗಳಲ್ಲಿ ಧರ್ಮವಿಷಯದ ಪಠ್ಯಪುಸ್ತಕವಾಗಿ, ಆಕರಗ್ರಂಥವಾಗಿ ಈ ಪುಸ್ತಕವನ್ನೇ ನಿಗದಿ ಮಾಡುತ್ತಿರುವುದು, ಇದನ್ನೇ ಮೆಚ್ಚುತ್ತಿರುವುದು ಇದು ಎಷ್ಟು ಮೌಲಿಕ ಗ್ರಂಥ ಎಂಬುದನ್ನು ತೋರಿಸುತ್ತದೆ. ಇದರಲ್ಲಿ ಶ್ರೀರಾಮಕೃಷ್ಣರ ಮತ್ತು ಅವರ ತತ್ವಗಳ ಉಲ್ಲೇಖ ಸಾಕಷ್ಟು ಸಲ ಬರುತ್ತದೆ. **ರಾಮಕೃಷ್ಣರು ೧೯ನೇ ಶತಕದ ಪರಮಶ್ರೇಷ್ಠ ಯೋಗಿ ಎಂದಿದ್ದಾರೆ ಡಾ.ಸ್ಮಿತ್.**

ಹಕ್ಸ್‌ಲಿ-ಹರ್ಡ್-ಇಷರ್‌ವುಡ್, ಈ ತ್ರಿಮೂರ್ತಿಗಳಲ್ಲಿ ಕ್ರಿಸ್ಟೋಫರ್ ಇಷರ್‌ವುಡ್ ಮಾತ್ರ ವೇದಾಂತ ವಿಚಾರಧಾರೆಯೊಂದಿಗೆ ಅತ್ಯಂತ ನಿಕಟವಾಗಿ ಕೂಡಿಕೊಂಡಿದ್ದರು. ತಮ್ಮ ದೀರ್ಘ ಜೀವನ ಪರ್ಯಂತ ಹಾಗೇ ಅಂಟಿಕೊಂಡಿದ್ದರು. ಹಕ್ಸ್‌ಲಿ ಕೆಲವು ವರ್ಷಗಳ ನಂತರ, ಅನುಭಾವ-ನಿರ್ವಾಣಗಳಿಗೆ ರಾಸಾಯನಿಕ ಔಷಧಿ ಪ್ರಚೋದಕಗಳ ಬಳಕೆಯನ್ನು ಪ್ರೋತ್ಸಾಹಿಸತೊಡಗಿ ವೇದಾಂತ ಮಾರ್ಗದಲ್ಲಿ ಹಿಂದುಳಿದರು. ಹರ್ಡ್ ಸಾಂಸ್ಕೃತಿಕ ಅಸ್ಪಷ್ಟತೆಯಲ್ಲಿ ಮುಳುಗಿಹೋದರು. ಇಷರ್‌ವುಡ್ ಮಾತ್ರ ತಮ್ಮಲ್ಲಿ ಸಾಕಷ್ಟಿದ್ದ ಸಾಹಿತ್ಯ ಕೌಶಲವನ್ನು ವೇದಾಂತವನ್ನು ಸಾರ್ವಜನಿಕರ ದೃಷ್ಟಿಗೆ ತರಲು ಬಳಸಿದರು. ಸೈಮನ್ ಆಂಡ್ ಷೂಸ್ಟರ್ ಎಂಬ ಅಮೆರಿಕೆಯ ಅಗ್ರ ಪಂಕ್ತಿಯ ಪ್ರಕಾಶಕರು ಪ್ರಕಟಿಸಿದ ಇಷರ್‌ವುಡ್‌ರ *Ramakrishna and His Disciples* ಎಂಬ ಪುಸ್ತಕ ಮಾತ್ರವಲ್ಲ ಸ್ವಾಮಿ ಪ್ರಭವಾನಂದರೊಡನೆ ಸೇರಿ ನಡೆಸಿದ ಸಾಹಿತ್ಯ ಕೆಲಸ—ಹಿಂದೂ ಧರ್ಮದ ಮೂಲಗ್ರಂಥಗಳ ಸೊಗಸಾದ ಅನುವಾದ—ವಿಸ್ತಾರವಾದ ವಾಚಕವೃತ್ತಕ್ಕೆ ತಲುಪಿದವು. ಈ ಇಬ್ಬರೂ ಜೊತೆಗೂಡಿ ತಂದ ಅನುವಾದಿತ ಕೃತಿಗಳೆಂದರೆ *The Song of God : Bhagavadgita; How to Know God: The Yoga Aphorisms*; ಮತ್ತು *Shankara's Crest-Jewel of Discrimination*—ಎಂಬಿವು ತುಂಬಾ ಹೆಸರಾದವು. ಅನೇಕ ವರ್ಷಗಳ ಕಾಲ ಇವು ಪ್ರತಿಯೊಂದೂ ಯಾರಾದರೊಬ್ಬ ಪ್ರಮುಖ ಪ್ರಕಾಶಕರಿಂದ ಸಹಸ್ರ ಸಹಸ್ರ ಸಂಖ್ಯೆಯಲ್ಲಿ, ಅಗ್ಗ ಬೆಲೆಯ ಜನಪ್ರಿಯ ಆವೃತ್ತಿಗಳಾಗಿ ಪ್ರಕಟವಾಗಿ ಸಾರ್ವಜನಿಕರಿಗೆ ಸುಲಭವಾಗಿ ದೊರೆಯುತ್ತಿದ್ದವು. ***Time* ಮಾಸಪತ್ರಿಕೆ ಪ್ರಭವಾನಂದ-ಇಷರ್‌ವುಡ್ ಜೋಡಿಯ ಭಗವದ್ಗೀತೆ ಅನುವಾದಿತ ಪುಸ್ತಕವನ್ನು ಉಚ್ಚಶ್ರೇಣಿಯ ಸಾಹಿತ್ಯಕೃತಿ** ಎಂದು

ಬಣ್ಣಿಸಿತು. ಈ ಪುಸ್ತಕದ ೧೦ ಲಕ್ಷಕ್ಕೂ ಹೆಚ್ಚು ಪ್ರತಿಗಳು ಮಾರಾಟವಾಗಿವೆ—೧೯೪೪ರಿಂದ ಇದುವರೆಗೆ. ಶ್ರೀ ಸಾಮಾನ್ಯ ಮಾರುಕಟ್ಟೆಯ ಆವೃತ್ತಿಯಾಗಿ ಈಗಲೂ ದೊರೆಯುತ್ತಿರುವ ಪುಸ್ತಕ ಇದೊಂದೇ. ಇಮತ್ತು ಈ ಪುಸ್ತಕ ಕಾಲೇಜಿನ ಪಠ್ಯಪುಸ್ತಕವಾಗಿ ಮತ್ತೆ ಮತ್ತೆ ಆಯ್ಕೆಯಾಗಿ ಎಲ್ಲ ಪುಸ್ತಕದಂಗಡಿಗಳಲ್ಲೂ ಸಿಕ್ಕುತ್ತದೆ. ಇತರ ಎಷ್ಟೋ ವೇದಾಂತದ ಪುಸ್ತಕಗಳಿಗೆ ಈ ಅದೃಷ್ಟವಿಲ್ಲ.

೧೯೯೬ರಲ್ಲಿ *New York Times Book Review* ಶತಮಾನದ ಅತ್ಯಂತ ಪ್ರಭಾವಶಾಲಿ ಲೇಖಕರ ಒಂದು ಪಟ್ಟಿಯನ್ನು ತಯಾರಿಸಿತು. ಆ ಪಟ್ಟಿಯಲ್ಲಿ ಹಕ್ಸ್ಲಿ ಮತ್ತು ಇಷರ್‌ವುಡ್ ಇಬ್ಬರ ಹೆಸರೂ ಇವೆ. ಇವರ ಜೊತೆಗೆ ವೇದಾಂತದಿಂದ ಪ್ರಭಾವಿತನಾದ ಜೆ. ಡಿ. ಸ್ಯಾಲಿಂಜರ್ ಎಂಬ ಮತ್ತೊಬ್ಬ ಜಗದ್ವಿಖ್ಯಾತ ಅಮೆರಿಕಾ ಲೇಖಕನ ಹೆಸರೂ ಇದೆ.

೫೦ರ ದಶಕದಲ್ಲಿ ಸ್ಯಾಲಿಂಜರ್ ಅತಿ ಹೆಚ್ಚು ಮಾರಾಟವಾಗುತ್ತಿದ್ದ ತಮ್ಮ *Franny and Zooey* ಎಂಬ ಪುಸ್ತಕದ ಪ್ರತಿಯನ್ನು ತಮ್ಮ ಗುರು ಸ್ವಾಮಿ ನಿಖಿಲಾನಂದರಿಗೆ ಕೊಡುತ್ತಾರೆ. ತಾವು ವೇದಾಂತ ತತ್ತ್ವವಿಚಾರಗಳನ್ನು ಪ್ರಸಾರಮಾಡಲು ಸಮರ್ಥರಾದುದು ಈ ಪುಸ್ತಕದಲ್ಲಿ ಬರುವ ಕಥೆಗಳ ಮಾಧ್ಯಮದ ಮೂಲಕ ಎಂಬ ಅರ್ಥ ಬರುವ ಹಾಗೆ ಆ ಪುಸ್ತಕದ ಮುನ್ನುಡಿಯಲ್ಲಿ ಬರೆದಿದ್ದಾರೆ. ಸ್ಯಾಲಿಂಜರ್‌ರ ಅನಂತರದ ಕಥೆಗಳಲ್ಲೆಲ್ಲ ವೇದಾಂತವೆ ತುಂಬಿದೆ. ಒಂದು ಕಥೆಯಲ್ಲಿ ಸ್ವಾಮಿ ವಿವೇಕಾನಂದರನ್ನು ಈ ಶತಮಾನದ ಅತ್ಯಂತ ಸ್ಫೂರ್ತಿದಾಯಿ, ಸಮರ್ಥ, ಸುಸಜ್ಜಿತ, ಸ್ವೋಪಜ್ಞ ಮೇರು ಪುರುಷ ಎಂದು ಬಣ್ಣಿಸುವ ಮಾತನ್ನು ಒಂದು ಪಾತ್ರದ ಬಾಯಿಂದ ಆಡಿಸುತ್ತಾರೆ. 'ಅವರ ಬಗ್ಗೆ ನನಗಿರುವ ಅಂತಃಕರಣ ನಾನು ಬದುಕಿರುವಷ್ಟು ಕಾಲವೂ ಅಷ್ಟೇ ತೀವ್ರವಾಗಿರುತ್ತದೆ—ಯಾವತ್ತೂ ತಗ್ಗುವುದಿಲ್ಲ—ಎಂದಿಗೂ ಮುಗಿದು ಹೋಗುವುದಿಲ್ಲ...... ನನ್ನ ಮಾತುಗಳನ್ನು ಬರೆದಿಟ್ಟುಕೊ. ಕಲ್ಕತ್ತಾದ ಗಜಿಬಿಜಿಯ ರಸ್ತೆಯಲ್ಲಿ ಇಲ್ಲಾ ಎಲ್ಲಾದರೂ ಅವರ ಕೈ ಕುಲುಕುವ, ಇಲ್ಲವೆ ಸರಕ್ಕಂತ ಒಮ್ಮೆ ಗೌರವಪೂರ್ವಕವಾಗಿ ಹಲೋ ಎಂದು ಅವರ ಗಮನ ಸೆಳೆಯುವ ಅವಕಾಶ ಸಿಕ್ಕುವುದಾದರೆ ನನ್ನ ಆಯುರ್ಮಾನದಲ್ಲಿ ೧೦ ವರ್ಷ—ಇಲ್ಲಾ ಅದಕ್ಕೂ ಹೆಚ್ಚು ಬಿಟ್ಟುಕೊಟ್ಟೇನು,' ಎನ್ನುತ್ತಾನೆ ಒಂದು ಕಥೆಯ ನಾಯಕ.

ಈ ಶತಮಾನದ ಅತ್ಯಂತ ಪ್ರಮುಖ ಧಾರ್ಮಿಕ ತತ್ತ್ವಶಾಸ್ತ್ರಜ್ಞರಲ್ಲಿ ಒಬ್ಬರಾದ ಹೆನ್ರಿಕ್ ಜಿಮ್ಮರ್, ರಾಮಕೃಷ್ಣ-ವಿವೇಕಾನಂದ ಕೇಂದ್ರಕ್ಕೆ ಹಾಜರಾಗುತ್ತಿದ್ದ ಉಜ್ವಲ ವ್ಯಕ್ತಿಗಳಲ್ಲಿ ಒಬ್ಬರಾಗಿದ್ದರು. ಭಾರತೀಯ ತತ್ತ್ವಶಾಸ್ತ್ರದಲ್ಲಿ ಜಿಮ್ಮರ್ ತಳೆದ ಆಸಕ್ತಿ, ಹಲವಾರು ಪಾಶ್ಚಾತ್ಯರು ಪೂರ್ವದೇಶಗಳನ್ನು ಯಾವ ದೃಷ್ಟಿಯಿಂದ ನೋಡುತ್ತಿದ್ದರೊ, ಆ ದೃಷ್ಟಿ ಬದಲಾಗುವಂತೆ ಮಾಡುವುದರಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡಿತು. ಜಿಮ್ಮರ್ ತಮ್ಮ *Philosophies of India* ಎಂಬ ಮಹತ್ತರವಾದ ಕೃತಿಯಲ್ಲಿ ಶ್ರೀರಾಮಕೃಷ್ಣರನ್ನು ಪ್ರಮುಖವಾಗಿ ಪ್ರಸ್ತಾಪಿಸಿದ್ದಾರೆ. ಅವರ ಮಾತುಗಳನ್ನು ಮತ್ತೆ ಮತ್ತೆ ಉಲ್ಲೇಖಿಸಿದ್ದಾರೆ—ಅದೂ ಕೆಲವು ಕಡೆ ಪುಟಗಟ್ಟಲೆ! ಅನೇಕ ಪುಟಗಳಷ್ಟು ಕೆಲವು ಉಲ್ಲೇಖಗಳಿವೆ. ಗ್ರಂಥದ ಕೊನೆಯಲ್ಲಿ ಸ್ವಾಮಿ ನಿಖಿಲಾನಂದರ *The Gospel of Sri Ramakrishna* ಪುಸ್ತಕದಿಂದಾಯ್ದ ವಿಶೇಷವಾದ ಮತ್ತು ಸೊಗಸಾದ ರಾಮಕೃಷ್ಣರ ಉಕ್ತಿಗಳನ್ನು ಸೇರಿಸಲಾಗಿದೆ.

ಅಪರೂಪವಾದ ಧೀಶಕ್ತಿಯಿದ್ದ ಜೋಸೆಫ್ ಕ್ಯಾಂಪ್‌ಬೆಲ್‌ರಂತಹ ವ್ಯಕ್ತಿ ಹಲವಾರು ವರ್ಷಗಳ ಕಾಲ *The Gospel of Sri Ramakrishna* ಎಂಬ ಪುಸ್ತಕವನ್ನು ಅನುವಾದದ ಮೂಲಕ ಸಿದ್ಧಪಡಿಸುವ ಕಾರ್ಯದಲ್ಲಿ ಸ್ವಾಮಿ ನಿಖಿಲಾನಂದರಿಗೆ ಸಹಾಯ ಮಾಡಿದುದು ಮಾತ್ರವಲ್ಲದೆ, ನಾಲ್ಕು ಸಂಪುಟಗಳುಳ್ಳ ಉಪನಿಷತ್ತುಗಳ ಅನುವಾದದಲ್ಲೂ ನೆರವಾಗಿರುವರು. ಕ್ಯಾಂಪ್ ಬೆಲ್ ಕೆಲವು ವರ್ಷ ನ್ಯೂಯಾರ್ಕ್ ರಾಮಕೃಷ್ಣ-ವಿವೇಕಾನಂದ ಕೇಂದ್ರದ ಅಧ್ಯಕ್ಷರಾಗಿಯೂ ಅಲ್ಲಿನ ಚಟುವಟಿಕೆಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ನಿಜಕ್ಕೂ ಇವರ ಹೆಸರು ಅಲ್ಲಿ ಮನೆ ಮಾತಾಗಿಬಿಟ್ಟಿತ್ತು. ಕೆ.ಸಿ.ಕೋಲ್ ಒಮ್ಮೆ *News Week*ನಲ್ಲಿ ಬರೆದಂತೆ, ಜೋಸೆಫ್ ಕ್ಯಾಂಪ್‌ಬೆಲ್ 'ಅಮೆರಿಕೆಯ ಬದುಕಿನಲ್ಲಿ ಕಾಣುವ ತೀರ ಅಪರೂಪದ ಮೇಧಾವಿ.'

ಇವರು ಪುರಾಣಗಳು ಮತ್ತು ಜಾನಪದ ಸಾಹಿತ್ಯಗಳ ಬಗ್ಗೆ ಅಧಿಕಾರವಾಣಿಯಿಂದ ಹೇಳಬಲ್ಲವರಲ್ಲಿ ವಿಶ್ವದಲ್ಲೇ ಶ್ರೇಷ್ಠ ವಿದ್ವಾಂಸರೆನಿಸಿದ್ದಾರೆ. ಇವರ ವಿಪುಲವಾದ ಬರಹಗಳಲ್ಲಿ ಶ್ರೀರಾಮಕೃಷ್ಣರ ಉಲ್ಲೇಖ ಎಲ್ಲಾ ಕಡೆ ತಪ್ಪದೆ ಇರುತ್ತದೆ. ಕೆಲವೆಡೆ ದೀರ್ಘವಾಗಿ, ಕೆಲವು ಕಡೆ ಸಂಕ್ಷಿಪ್ತವಾಗಿ ರಾಮಕೃಷ್ಣ ಸಾಹಿತ್ಯದಿಂದ ಆರಿಸಿದ ಉದ್ಧೃತ ಭಾಗಗಳಿವೆ. ಕ್ಯಾಂಪ್‌ಬೆಲ್‌ರ ವಾಚಕರಾರೂ ಶ್ರೀರಾಮಕೃಷ್ಣರಿಂದ ತಪ್ಪಿಸಿಕೊಳ್ಳಲಾರರು. ಇವರ ಬರಹದಲ್ಲಿರುವಷ್ಟು ಮನಸೆಳೆವ ಗುಣ ೨೦ನೇ ಶತಮಾನದ ಇನ್ನಾವ ಚಿಂತನಶೀಲರ ಬರವಣಿಗೆಯಲ್ಲೂ ಕಾಣಸುವುದಿಲ್ಲ. ಹೀಗಾಗಿ ಇತರ ಅನೇಕರು ಶ್ರೀರಾಮಕೃಷ್ಣರನ್ನು ಪ್ರಸ್ತಾಪಿಸಿ ಬರೆದರೂ ಇವರಷ್ಟು ಗಾಢವಾದ ಪ್ರಭಾವವನ್ನು ಅವರು ಯಾರೂ ಬೀರಲಿಲ್ಲ.

ಇಷ್ಟೆಲ್ಲ ಹೇಳುವಾಗ, ವಿಖ್ಯಾತ ಇತಿಹಾಸಕಾರರಾದ ಅರ್ನಾಲ್ಡ್ ಟಾಯನ್‌ಬಿ, ವಿಲ್ ಮತ್ತು ಏರಿಯಲ್ ಡ್ಯೂರಾಂಟ್; ಸಮಾಜಶಾಸ್ತ್ರಜ್ಞ ಪಿತಿರಿಮ್ ಸೊರೊಕಿನ್; ಬಹು ದೊಡ್ಡ ಮನೋವಿಜ್ಞಾನಿಯೂ ತತ್ತ್ವಜ್ಞಾನಿಯೂ ಆದ ಕಾರ್ಲ್ ಯೂಂಗ್; ಟ್ರ್ಯಾಪಿಸ್ಟ್ ಸಂನ್ಯಾಸಿ ಮತ್ತು ಲೇಖಕ ಥಾಮಸ್ ಮೆರ್ಟನ್—ಇಂಥ ಇತರ ಪ್ರಮುಖ ಮೇಧಾವಿಗಳು ಸಹ ಅಮೆರಿಕೆಯ ಸಾರ್ವಜನಿಕ ವಲಯಕ್ಕೆ ವೇದಾಂತ ವಿಚಾರಗಳನ್ನು ಪರಿಚಯಿಸಲು ಯತ್ನಿಸಿದರು ಎಂಬುದನ್ನು ನಾವು ಗಮನದಲ್ಲಿಡಬೇಕು. ಈ ಎಲ್ಲ ವಿದ್ವಜ್ಜ್ಯೋತಿಗಳು ಮತ್ತು ಇನ್ನೆಷ್ಟೋ ಅನುಕ್ತರಾಗೇ ಉಳಿದ ಮಹನೀಯರು ಶ್ರೀರಾಮಕೃಷ್ಣ-ಸ್ವಾಮಿ ವಿವೇಕಾನಂದರು ಪ್ರತಿಪಾದಿಸಿದ ವೇದಾಂತದ ನೂತನ ವಿಚಾರಗಳಿಗೆ ಅಮೆರಿಕೆಯ ಧಾರ್ಮಿಕ ಮನಸ್ಸು ತೆರೆದುಕೊಳ್ಳುವಂತೆ ಮಾಡಿದರು.

ಈಚಿನ ವರ್ಷಗಳಲ್ಲಿ ಬೌದ್ಧಧರ್ಮ ಅತಿವೇಗವಾಗಿ ಏಳಿಗೆ ಹೊಂದುತ್ತಿದೆ. ಬೌದ್ಧಧರ್ಮದ ಬೆಂಬಲಕ್ಕೆ ದಲಾಯಿ ಲಾಮಾ, ಥೀಛ್ ನ್ಹಾತ್ ಹಾನ್ಹರಂಥ ಜಗತ್ಪ್ರಸಿದ್ಧ ಗುರುಗಳಿದ್ದಾರೆ. ಅವರ ಆದರ್ಶಜೀವನ, ಸುಪ್ರಕಟಿತ ಬೋಧನೆಗಳು ಲಕ್ಷಾಂತರ ಪಾಶ್ಚಾತ್ಯರ

ಮನ ಸೆಳೆದಿವೆ. ಪೆಮಾ ಚೋಡ್ರಾನ್ ಎಂಬ ಬೌದ್ಧ ಭಿಕ್ಷುಣಿ ತಮ್ಮ ಸರಳ ಐಹಿಕ ಜಾಣ್ಮೆಗೂ, ಹಾಸ್ಯಪ್ರಜ್ಞೆಗೂ ಹೆಸರಾಗಿದ್ದಾರೆ. ಪಶ್ಚಿಮ ಜಗತ್ತಿನಲ್ಲಿ ಅನ್ಯಾದೃಶವಾದ ಯಶಸ್ಸು ಅವರದು. ದೇಶದ ಯಾವ ಪುಸ್ತಕದ ಅಂಗಡಿಗೆ ಹೋದರೂ ಬೌದ್ಧಧರ್ಮದ ಪುಸ್ತಕಗಳು ದೊರೆಯುತ್ತವೆ. ಅಮೆರಿಕಾದ ದೊಡ್ಡ ದೊಡ್ಡ ಪ್ರಕಾಶಕರೇ ಈ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಇದೆಲ್ಲ ಅಮೆರಿಕೆಯಲ್ಲಿ ಬೌದ್ಧ ಧರ್ಮದ ಬೆಳವಣಿಗೆಯನ್ನು ಉತ್ತೇಜಿಸಿದೆ. ಇದು ಮಾತ್ರವಲ್ಲದೆ ಇನ್ನೂ ಹಲವಾರು ಪೌರಸ್ತ್ಯ ಧಾರ್ಮಿಕ ಪಂಥಗಳು ಅಮೆರಿಕದಲ್ಲಿ ಜನಪ್ರಿಯತೆಯನ್ನು ಪಡೆಯುತ್ತಿವೆ. ಈಗ ತುಂಬಿ ತುಳುಕುತ್ತಿರುವ ಹಲವಾರು ಧರ್ಮಗಳ ಗಡಣದಲ್ಲಿ ಒಂದು ಅತಿ ಚಿಕ್ಕ ಗುಂಪು ವೇದಾಂತ.

ಹಾಗಾದರೆ ಅಮೆರಿಕೆಯಲ್ಲಿ ವೇದಾಂತದ ಪ್ರಭಾವ ಈಗ ಕ್ಷೀಣಿಸುತ್ತಿದೆಯೇ? ಖಂಡಿತ ಇಲ್ಲ. ಶಾಲೆ-ಕಾಲೇಜು-ವಿಶ್ವವಿದ್ಯಾನಿಲಯಗಳ ಪಠ್ಯೇತರ ಚಟುವಟಿಕೆಗಳಲ್ಲೂ, ಅಂತರ-ಧರ್ಮ ಸಂವಾದಗಳಲ್ಲಿಯೂ ಸಕ್ರಿಯವಾಗಿ ಭಾಗವಹಿಸುತ್ತಿರುವ ವೇದಾಂತ ಸಂಘಗಳಿರುವ ನಗರಗಳಲ್ಲಿ ವೇದಾಂತ ಜೀವಂತವಾಗಿದೆ, ಚೈತನ್ಯಪೂರ್ಣವಾಗಿದೆ. ಪುಸ್ತಕದಂಗಡಿಗಳಲ್ಲಿ ವೇದಾಂತದ ಪುಸ್ತಕಗಳ ಮಾರಾಟ ಹಿಂದೆ ಆಗುತ್ತಿದ್ದಷ್ಟಿಲ್ಲವಾದರೂ, ಇಂಟರ್‌ನೆಟ್‌ನಲ್ಲಿನ ಮಾರಾಟ ಪ್ರಚಂಡವಾಗಿ ಹೆಚ್ಚಾಗಿದೆ. ಈ ಒಲವು ಇನ್ನೂ ಹೆಚ್ಚಾಗುವುದರಲ್ಲಿ ಸಂದೇಹವಿಲ್ಲ.

ವೇದಾಂತ ಸೈಟ್‌ಗಳು, ಸಂವಹನ ಪಥದಲ್ಲಿ ಇವೆ. ಓದಲು ಸೊಗಸಾದ ವೇದಾಂತ ಪಠ್ಯ ಸಾಮಗ್ರಿಯನ್ನು ಒದಗಿಸುವುದಷ್ಟೇ ಅಲ್ಲ, ಪ್ರಶ್ನೋತ್ತರ ವೇದಿಕೆಯನ್ನೂ ಒಗದಿಸುತ್ತವೆ. ಈ ವೇದಿಕೆಗೆ ದಕ್ಷಿಣ ಕ್ಯಾರೊಲಿನಾದಿಂದ ಇತ್ತೀಚೆಗೆ ಒಂದು ಪ್ರಶ್ನೆ ಬಂದಿತು: 'ಚರ್ಚಿನಲ್ಲಿ ಸ್ವಾಮಿ ಪ್ರಭವಾನಂದರ, *The Eternal Companion* ಪುಸ್ತಕದ ಅಧ್ಯಯನ ಮಾಡುತ್ತಿದ್ದೇವೆ. "ವಿವೇಕ" ಎಂಬ ಪದ ಸ್ವಲ್ಪ ಗೊಂದಲವುಂಟುಮಾಡಿದೆ. ಅದರ ನಿಖರವಾದ ಅರ್ಥ ಏನು? ಯಾವುವು ನಮ್ಮನ್ನು ಆತ್ಮ ಸಾಕ್ಷಾತ್ಕಾರದೆಡೆಗೆ ಒಯ್ಯುತ್ತವೆ, ಯಾವುವು ಒಯ್ಯುವುದಿಲ್ಲ, ಇವುಗಳ ವ್ಯತ್ಯಾಸವನ್ನು ಅರಿಯುವ ಶಕ್ತಿ—ಎಂದು ಈ ಪದದ ಅರ್ಥವೇ?'

ದಕ್ಷಿಣ ಕ್ಯಾರೊಲಿನಾ ತುಂಬಾ ಸಂಪ್ರದಾಯಶರಣವಾದ ರಾಜ್ಯ. ಅಂಥಲ್ಲಿ ಕ್ರೈಸ್ತ ಪ್ರಾರ್ಥನಾ ಮಂದಿರದ(ಚರ್ಚ್‌ನ)ಲ್ಲಿ ವೇದಾಂತ ಪುಸ್ತಕವನ್ನು ಅಧ್ಯಯನ ಮಾಡುತ್ತಿದ್ದಾರೆ ಎಂಬುದೇ ಸಾಕು, ಕೇಳಿ ಆಶ್ಚರ್ಯಾಘಾತದಿಂದ ತಲೆ ಸುತ್ತುವುದಕ್ಕೆ. ಆದರೆ ಈ ನಿದರ್ಶನ ವೇದಾಂತದ ಪ್ರಗತಿ ಈ ದೇಶದಲ್ಲಿ ಎಷ್ಟಾಗಿದೆ ಎಂಬುದನ್ನು ಸ್ಪಷ್ಟಪಡಿಸುತ್ತದೆ.

ತನ್ನ ಮನೆಗೆ ಅತ್ಯಂತ ಸಮೀಪದ ವೇದಾಂತ ಕೇಂದ್ರ ಯಾವುದು? ಅದರ ವಿವರಗಳನ್ನು ಕೊಡಿ, ಹಾಗೆಯೆ ವೇದಾಂತ ಸಾಹಿತ್ಯದ ಬಗ್ಗೆ ಇನ್ನೂ ಹೆಚ್ಚು ಮಾಹಿತಿಗಳನ್ನು ನೀಡಿರಿ, ಎಂಬ ಕೋರಿಕೆಗಳು ಇಂಟರ್‌ನೆಟ್‌ನಲ್ಲಿ ಬಹು ಸಂಖ್ಯೆಯಲ್ಲಿ ಬರುತ್ತಿವೆ. ಒಟ್ಟಿನಲ್ಲಿ ಮಾಹಿತಿ ಕ್ರಾಂತಿಯೆ ಆಗುತ್ತಿದೆ. ಇದು ವೇದಾಂತ ಸಂದೇಶವನ್ನು ಹೆಚ್ಚು ವಿಸ್ತಾರವಾದ ಪ್ರೇಕ್ಷಕ ವರ್ಗಕ್ಕೆ ತಲುಪಿಸುವುದರಲ್ಲಿ ಸಕಾರಾತ್ಮಕ ಪರಿಣಾಮವುಂಟುಮಾಡಿದೆ.

'ಮನಸ್ಸಿದ್ದಲ್ಲಿ ಮಾರ್ಗ' ಎಂಬುದನ್ನಿದು ತೋರಿಸುತ್ತದೆ, ಅದರಲ್ಲೂ ದೇವರ ವಿಚಾರದಲ್ಲಿ! ದೇವರು ತನ್ನ ಕಾರ್ಯವನ್ನು ತಾನು ಮಾಡಿಯೇ ಮಾಡುತ್ತಾನೆ ಎಂದು ಯಾವಾಗಲೂ ಕೇಳುತ್ತಿರುತ್ತೇವೆ. ಈ ಕಾರ್ಯ ಈಗ ಅದೆಷ್ಟು ಬಗೆಯಲ್ಲಿ ಪ್ರಗತಿ ಹೊಂದುತ್ತಿದೆ ಎಂಬುದನ್ನು ಈಗ್ಗೆ ಕೇವಲ ಒಂದು ದಶಕದ ಹಿಂದೆ ಕೂಡ ಮರ್ತ್ಯರಾದ ನಾವು ಕಲ್ಪಿಸಿಕೊಳ್ಳುವುದಕ್ಕೂ ಆಗುತ್ತಿರಲಿಲ್ಲ.

ಆದ್ದರಿಂದ ಭವಿಷ್ಯ ಆಶಾದಾಯಕವಾಗಿರುವ ಹಾಗೆ ಕಾಣುತ್ತಿದೆ, ನಾವು ಶ್ರೀರಾಮಕೃಷ್ಣರಿಗೆ ಮತ್ತು ಅವರ ದಿವ್ಯ ಆದರ್ಶಗಳಿಗೆ ನಿಷ್ಠರಾಗಿರುವವರೆಗೆ. ನಮ್ಮ ಕರ್ತವ್ಯವನ್ನಿಷ್ಟು, ಶ್ರದ್ಧೆಯಿಂದ ಕೈಲಾದಷ್ಟು ಮಾಡುವುದಷ್ಟೆ ನಮ್ಮ ಕೆಲಸ. ಉಳಿದುದು ದೇವರಿಗೆ ಸೇರಿದುದು. ಭಗವಂತ ತನ್ನದೇ ರೀತಿಯಲ್ಲಿ, ಯಾವ ಕಾಲಕ್ಕೆ ಆಗಬೇಕೊ ಆ ಕಾಲಕ್ಕೆ ಅದನ್ನು ಪೂರೈಸುತ್ತಾನೆ.

ನಿಮ್ಮ ಸ್ಥಳೀಯ ಪುಸ್ತಕದಂಗಡಿಯಲ್ಲಿ ವೇದಾಂತದ ಪುಸ್ತಕಗಳು ಸಿಕ್ಕುತ್ತಿಲ್ಲವೆ? ಚಿಂತಿಸಬೇಡಿ. ಜಗತ್ತಿನ ಅತಿ ದೊಡ್ಡ ಪುಸ್ತಕ ಮಾರಾಟಗಾರರ ವೆಬ್‌ಸೈಟುಗಳಲ್ಲಿ ವೇದಾಂತ ಪುಸ್ತಕಗಳನ್ನು ಕಾಣಬಹುದು: *amazon.com.* ಮತ್ತು *barnestandnoble. com* ಹೀಗೆ ಇನ್ನೂ ಕೆಲವು. ಒಮ್ಮೆ ಕುತೂಹಲಕ್ಕಾಗಿ ನಾನು ಸ್ವಾಮಿ ಶ್ರದ್ಧಾನಂದರ *Seeing God Everywhere* ಪುಸ್ತಕವನ್ನು ಓದಲೆಂದು *amazon.com* ಸೈಟಿಗೆ ಗುಂಡಿಯೊತ್ತಿದೆ. ತಕ್ಷಣ ಅದು ತೆರೆಯ ಮೇಲೆ ಪ್ರತ್ಯಕ್ಷವಾಯಿತು. ಬರಿ ಪಠ್ಯವಷ್ಟೇ ಅಲ್ಲ. ಅದರ ಕೆಳಗೆ ಸೊಗಸಾದ ವಿಮರ್ಶಾವಲೋಕನ ಸಹ: 'ಇದೊಂದು ಚೆನ್ನಾಗಿ ಓದಿಸಿಕೊಂಡು ಹೋಗುವ ವಿಚಾರ ಪ್ರಚೋದಕ, ಅಧ್ಯಾತ್ಮಗ್ರಂಥ. ವಿಶೇಷವಾಗಿ ವಿಚಾರ ಸಂಪದವನ್ನು ಹೆಚ್ಚಿಸುತ್ತದೆ. ಎಲ್ಲ ಧರ್ಮ-ಸಂಸ್ಕೃತಿಗಳನ್ನೂ ಒಳಗೊಳ್ಳುವ ಸಂದೇಶವನ್ನಿಲ್ಲಿ ಕಾಣುತ್ತೇವೆ. ವೈಚಾರಿಕ ಅಂತರ್‌ದೃಷ್ಟಿಯನ್ನು ನೀಡುತ್ತದೆ. ಓದಲು, ಅರ್ಥಮಾಡಿಕೊಳ್ಳಲು ಅತೀವ ಸುಲಭವಾಗಿದೆ. ಒಮ್ಮೆ ಓದಲು ಎತ್ತಿಕೊಂಡರೆ ಕೆಳಗಿಡಲು ಮನಸ್ಸಾಗುವುದಿಲ್ಲ. ಪುಸ್ತಕದ ಕಡೆಯಲ್ಲಿ ಕೊಟ್ಟಿರುವ ಆಧ್ಯಾತ್ಮಿಕ ಸಾಧನೆಯ ಅಭ್ಯಾಸ ಸೂಚಿ, ದೇವರೊಡನೆ ನಿಕಟ ಬಾಂಧವ್ಯವನ್ನಿರಿಸಿಕೊಳ್ಳಬಯಸುವವರಿಗಂತೂ ವಿಶೇಷವಾಗಿ ಸಹಾಯಕವಾಗಿದೆ.' ವೇದಾಂತಕ್ಕೆ ಸಂಪೂರ್ಣ ಅಪರಿಚಿತನಾಗಿದ್ದ ವ್ಯಕ್ತಿಯೊಬ್ಬ ಈ ಗ್ರಂಥವನ್ನೋದಿದ ಬಳಿಕ ಸ್ಫೂರ್ತಿಗೊಂಡು ಸ್ವಯಂ ಪ್ರೇರಿತನಾಗಿ ಈ ವಿಮರ್ಶಾವಲೋಕನವನ್ನು ಕಳಿಸಿದ್ದಾನೆ. ವಿಚಾರಿಸಿದಾಗ ಈತ ಒಬ್ಬ ಕ್ಯಾಥೊಲಿಕ್ ಧರ್ಮಾಧಿಕಾರಿ ಎಂದು ಪತ್ತೆಯಾಯಿತು. ಇದಂತೂ ಪರಮಾಶ್ಚರ್ಯ!

*(ಮೇಲಿನ ಲೇಖನದ ಒಂದು ಭಾಗ)*